ತೆರೆದು ಹೊರಬಂದ ಆಯುಷಿ, 'ಬನ್ನಿ ಅಂಕಲ್ ಬನ್ನಿ' ಎಂದು ರಾಯರನ್ನು ಪ್ರೀತಿಯಿಂದ ಸ್ವಾಗತಿಸಿ ಚಾವಡಿಯ ಫ್ಯಾನು ಹಾಕಿ 'ಕುಳಿತುಕೊಳ್ಳಿ' ಎಂದು ಉಪಚಾರ ನಡೆಸಿದಳು. ರಾಯರು ತುಂಬ ಆಕರ್ಷಕವಾಗಿ ಶೃಂಗರಿಸಲ್ಪಟ್ಟಿದ್ದ ಆ ಹಾಲ್‌ನ ಆಸನ ವ್ಯವಸ್ಥೆ, ಗೋಡೆಯಲ್ಲಿ ಕೆ.ಕೆ. ಹೆಬ್ಬಾರರು ಚಿತ್ರಿಸಿದ ಕಾರಂತರ ರೇಖಾಚಿತ್ರ ಮತ್ತು ಠಾಗೋರರ ಭಾವಚಿತ್ರಗಳನ್ನು ನೋಡಿ ಮನಸ್ಸಿನೊಳಗೇ 'ಗುಡ್' ಎಂದುಕೊಂಡರು.

'ಕುಡಿಯಲು ಏನು ಕೊಡಲಿ?' ಎಂದು ರಾಯರನ್ನು ಉಪಚರಿಸಿದ ಆಯುಷಿಗೆ ರಾಯರು, 'ಅದೆಲ್ಲ ಇರಲಿ ಮಗು, ಯಾವುದು ಕೊಟ್ಟರೂ ನಡೆಯುತ್ತದೆ' ಎಂದು ಟೀ ಕುಡಿದರು. ಆಮೇಲೆ ಆಯುಷಿ ಉದ್ಯೋಗದಲ್ಲಿರುವ ಪಿ.ಯು. ಕಾಲೇಜಿನ ಕುರಿತು ಅದು ಇದು ವಿಚಾರಿಸಿದ ರಾಯರು, 'ನಾನು ನಿನ್ನ ಸುಂದರ ಸಂಸಾರವನ್ನು ನೋಡಲು ಬರಬೇಕಿತ್ತು. ಆದರೆ ನಾನು ಬರಬೇಕಾದ ಕಾರಣ ಹೀಗಾಯಿತಲ್ಲ ಎಂಬ ನೋವು ನಿನ್ನ ತಾಯಿಯಷ್ಟೇ ನನಗೂ ಇದೆ' ಎಂದರು.

ಆಯುಷಿ ಮಾತನಾಡಲಿಲ್ಲ. ರಾಯರೂ ಆ ವಿಚಾರದಲ್ಲಿ ಹೆಚ್ಚು ಮಾತು ಮುಂದುವರಿಸದೆ 'ನಿನ್ನ ಗಂಡನಿಗೆ ನಾನು ಬರುವ ವಿಷಯ ಗೊತ್ತಿದೆ ತಾನೇ?' ಎಂದು ಪ್ರಶ್ನಿಸಿದರು. ಅವರಲ್ಲಿ ಆಗ ಆಯುಷಿ ಮತ್ತು ಅವಳ ಗಂಡನ ಮನೋಸ್ಥಿತಿ ಹೇಗಿದೆ ಎಂದು ತಿಳಿಯುವ ಕುತೂಹಲವಿತ್ತು.

'ಗೊತ್ತಿದೆ ಅಂದರೆ ಗೊತ್ತಿದೆ. ಇಲ್ಲ ಅಂದರೆ ಇಲ್ಲ. ಅವರು ನನ್ನಲ್ಲಿ ಕ್ಯಾಜುವಲ್ ಆಗಿ ಮಾತನಾಡುವುದು ಕಡಿಮೆ. ನಾನೂ ಅಷ್ಟೇ. ಬೆಳಗ್ಗೆ ನಾನು ಅವರನ್ನು ಕಾಫಿ ತಿಂಡಿಗೆ ಕರೆಯುವುದು, ಮಧ್ಯಾಹ್ನ ಮತ್ತು ರಾತ್ರೆಯ ಊಟ ಸಿದ್ಧಪಡಿಸಿ ಮೇಜಿನ ಮೇಲಿಡುವುದು ಬಿಟ್ಟರೆ ನನ್ನ ಕೆಲಸ ಮುಗಿದ ಹಾಗೆ! ಅವರು ಬೇಕಾದ್ದನ್ನು ಬೇಕಾದಷ್ಟು ಹಾಕಿಕೊಂಡು ತಿನ್ನುತ್ತಾರೆ. ನಾನು ನನ್ನ ಪಾಡಿಗೆ ಊಟ ತಿಂಡಿ ಮಾಡಿಕೊಳ್ಳುತ್ತೇನೆ' ಎಂದಳು. ರಾಯರಿಗೆ ತುಂಬಾ ಸಂಕಟವಾಯಿತು. ಆದರೆ ಯಾವ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸಬೇಕು ಎಂದು ತಿಳಿಯದ ಅವರು ಜಯಂತಿಯ ಮುಖ ನೋಡಿದರು.

ಜಯಂತಿ ತನ್ನ ಮಗಳ ಮುಖ ನೋಡಿ ಹೇಳಲು ಬೇಡವೋ ಎಂದುಕೊಂಡು ಮುಜುಗರಪಡುತ್ತಾ ಇದ್ದ ವಿಚಾರವನ್ನು ರಾಯರಲ್ಲಿ ಮುಚ್ಚಿಡುವುದು ಸರಿಯಲ್ಲ ಎಂಬಂತೆ 'ಇಬ್ಬರಿಗೂ ಈಗ ಬೆಡ್ ರೂಮು ಬೇರೆ ಬೇರೆ ಆಗಿದೆ' ಎಂದು ಹೇಳುತ್ತಾ 'ಮುಂದಿನದ್ದನ್ನು ನೀವು ಅಳಿಯಂದಿರನ್ನೇ ಕೇಳಬೇಕು' ಎಂದಳು.

ರಾಯರಿಗೆ ಮುಂದೆ ಮಾತು ಬೆಳೆಸುವುದು ಇಷ್ಟವಾಗಲಿಲ್ಲ. ಅವರು 'ನೋಡೋಣ. ಯಾವುದಕ್ಕೂ ನಿನ್ನ ಅಳಿಯಂದಿರು ಬರಲಿ. ಖಾಸಗಿಯಾಗಿ ನಾನು ಅವರಿಗೆ ಸ್ವಲ್ಪ ಹೇಳಬೇಕಾದ್ದಿದೆ' ಎನ್ನುತ್ತಾ ಮೇಜಿನ ಮೇಲೆ ಹರಡಿದ್ದ ಪತ್ರಿಕೆಗಳನ್ನು ಬಿಡಿಸಿ ನೋಡಹತ್ತಿದರು. ಸುಮಾರು ಅರ್ಧಗಂಟೆಯ ನಂತರ ಅಂಗಳದಲ್ಲಿ ಕಾರು ಬಂದು ನಿಂತಿತು. ಆಯುಷಿಯ ಗಂಡ ಬಂದ ಎಂದು ತಿಳಿದ ರಾಯರು, ಅವನ ಹೆಸರು ಏನು ಎಂದು ನೆನಪಿಸಿಕೊಂಡು, 'ಸಂಜೀವ ರಾವ್' ಎನ್ನುವುದು ನೆನಪಾಗುತ್ತಲೇ ಆತ ಹಜಾರಕ್ಕೆ ಕಾಲಿಡುತ್ತಿದ್ದಂತೆ, 'ಹಲೋ ಮಿಸ್ಟರ್ ಸಂಜೀವ ರಾವ್' ಎಂದು ಹಸ್ತಲಾಘವ ನೀಡಲು ಮೇಲೆದ್ದರು.

'ಹಲೋ ಸರ್, ವೆರಿ ನೈಸ್ ಟು ಮೀಟ್ ಯು' ಎಂದು ಸಂಜೀವ ರಾವ್ ರಾಯರ ಕೈಕುಲುಕಿದರು. 'ಕೋರ್ಟಿನಲ್ಲಿ ಒಂದು ಸಣ್ಣ ಹಿಯರಿಂಗ್ ಇತ್ತು ಸರ್. ಹಾಗಾಗಿ ಕೋರ್ಟು ಮುಗಿಯುವ ತನಕ ನಾನು ನಿಲ್ಲಬೇಕಾಯಿತು. ವೆರಿ ಸ್ಸಾರಿ, ನಿಮ್ಮನ್ನು ಕಾಯಿಸಿದ್ದಕ್ಕೆ' ಎಂದು ಹೇಳಿದ ಆತ, 'ಸರ್ ಒಂದು ನಿಮಿಷದಲ್ಲಿ ಡ್ರೆಸ್ ಚೇಂಜ್ ಮಾಡಿ ಬರುತ್ತೇನೆ. ಮೊದಲು ಊಟ, ಉಳಿದದ್ದು ಆಮೇಲೆ' ಎಂದು ತಮ್ಮ ಬೆಡ್‌ರೂಮಿನಾಚೆ ತೆರಳಿದರು.

'ಓ.ಕೆ.' ಎಂದು ಹೇಳಿದ ರಾಯರು ಸಂಜೀವ ರಾಯರನ್ನು ಕಾಯುತ್ತಿರುವಷ್ಟರಲ್ಲಿ ಡೈನಿಂಗ್‌ಹಾಲ್‌ನಲ್ಲಿ ಊಟದ ಸಿದ್ಧತೆಗಳನ್ನೆಲ್ಲ ನಡೆಸಿ ಹೊರಬಂದ ಆಯುಷಿ 'ನೀವು ಬನ್ನಿ' ಎಂದು ರಾಯರನ್ನು ಕರೆದರು.

ರಾಯರು 'ಜಸ್ಟ್ ಎ ಮಿನಿಟ್, ಕಾಯೋಣ' ಎಂದು ಹೇಳುತ್ತಿದ್ದಂತೆ ರಾಯರ ಮುಂದೆ ಬಂದು ನಿಂತ ಸಂಜೀವ ರಾಯರು 'ನಮ್ಮ ಮದುವೆಯ ಸಂಭ್ರಮದಲ್ಲಿ ಪಾಲ್ಗೊಂಡ ನಿಮ್ಮನ್ನು ಮತ್ತೆ ನೋಡುತ್ತಿರುವುದು ಈಗಲೇ' ಎಂದು ಮುಖದ ತುಂಬ ನಗೆ ತಂದುಕೊಂಡು, 'ಬನ್ನಿ ಸರ್, ಊಟ ಮಾಡೋಣ' ಎಂದು ರಾಯರನ್ನು ಡೈನಿಂಗ್ ಟೇಬಲಿನಾಚೆ ಕರೆದೊಯ್ದರು.

ರಾಯರ ಜೊತೆ ಜಯಂತಿಯೂ ಊಟಕ್ಕೆ ಕುಳಿತಳು. ಆಯುಷಿ ನಿರ್ಲಿಪ್ತತೆಯಿಂದ ಬಡಿಸುತ್ತಿದ್ದಳು. ತಮಾಷೆ, ಕುಶಾಲು ಅಥವಾ ಸಂಭ್ರಮ ಇಲ್ಲದೆ ಎಲ್ಲರೂ ಯಾಂತ್ರಿಕವಾಗಿ ಅಥವಾ ಮೌನವಾಗಿ ಉಣ್ಣುತ್ತಿದ್ದುದು ರಾಯರಿಗೆ ಇಷ್ಟವಾಗಲಿಲ್ಲ. ಅವರು ಬೇಕೆಂತಲೇ ಆಯುಷಿಯ ಮುಖ ನೋಡಿ, 'ತುಂಬಾ ಟೇಸ್ಟಿ ಅಡುಗೆ ಮಗಳೇ ನಿನ್ನದು. ಚೆನ್ನಾಗಿದೆ' ಎಂದು ಬೇರೆ ಬೇರೆ ಐಟಂಗಳನ್ನು ಬೇಕೆಂತಲೇ ಹೆಚ್ಚುವರಿಯಾಗಿ ಹಾಕಿಸಿಕೊಂಡು 'ನಿನ್ನ ಗಂಡನಿಗೆ ಆ ಕೀರು ಇನ್ನೊಂದು ಸೌಟು ಹಾಕು' ಎಂದರು.

ಆಯುಷಿ ಗಂಡನ ಮುಖ ನೋಡಿದಳು. ಸಂಜೀವರಾಯರು 'ಬೇಕು ಅಥವಾ ಬೇಡ' ಎನ್ನಲಿಲ್ಲ. ಹೆಂಡತಿಯ ಮುಖವನ್ನೂ ನೋಡಲಿಲ್ಲ. ಆಯುಷಿ ತನ್ನ ಗಂಡನೇ 'ಸಾಕು' ಎಂದು ಹೇಳಲಿ ಎಂಬಂತೆ ನಿಂತದ್ದು ನೋಡಿದ ಜಯಂತಿ, 'ನಿನ್ನ ಗಂಡನಿಗೆ ಒಂದು ಸೌಟು ಕೀರು ಬಡಿಸು, ನಿನ್ನ ಅಂಕಲ್ ಇಲ್ಲಿಗೆ ಬಂದ ಲೆಕ್ಕದಲ್ಲಿ ಇರಲಿ' ಎಂದು ಕಿಚಾಯಿಸಿದರು.

ರಾಯರು 'ಹೌದು ಹೌದು' ಎಂದರು.

ಸಂಜೀವ ರಾಯರು ಹೆಂಡತಿ ಹಾಕಿದ ಕೀರನ್ನು ಮೆಲ್ಲುತ್ತಾ 'ನಾನು ಒಮ್ಮೆ ನಿಮ್ಮ ಹಳ್ಳಿಗೆ ಬರಬೇಕೆಂದು ಯೋಚಿಸಿದ್ದುಂಟು ಸರ್. ನನಗೆ ಆ ಭಾಗದ ಜನಜೀವನದ ಪರಿಚಯ ಮತ್ತು ಭೌಗೋಳಿಕ ಜ್ಞಾನ ಇಲ್ಲವೇ ಇಲ್ಲ. ಈ ಸಲ ಮೇ ತಿಂಗಳಲ್ಲಿ ಕೋರ್ಟಿಗೆ ರಜೆ ಇರುತ್ತದಲ್ಲ, ಆಗ ನಾನು ನಿಮ್ಮಾಚೆ ಬರಲು ಪ್ಲಾನ್ ಹಾಕೋಣ ಎಂದುಕೊಂಡಿದ್ದೇನೆ' ಎಂದರು.

ರಾಯರು 'ವಂಡರ್‌ಫುಲ್! ಅಗತ್ಯ ಬನ್ನಿ. ನನ್ನ ಹೆಂಡತಿಗೆ ನೀವು ಬರುವುದು ತುಂಬಾ ಇಷ್ಟವಾಗುತ್ತದೆ' ಎಂದು ಹೇಳುವಾಗ ಒಳಗೊಳಗೇ ಈ ದಂಪತಿ ಬಂದರೆ, ಇವರು ಜಯಂತಿಯ ಮಗಳು ಅಳಿಯ ಎಂದು ಗೊತ್ತಾಗಿ ಸರೋಜ ಇವರನ್ನು ಇಲ್‌ಟ್ರೀಟ್ ಮಾಡಬಹುದು ಎಂಬ ಆತಂಕ ಅವರಿಗಾಯಿತು.

ಆಯುಷಿ ಅದಕ್ಕೆ ಪ್ರತಿಕ್ರಿಯೆ ಕೊಡಲಿಲ್ಲ. ಆದರೆ ರಾಯರೇ 'ಏನಮ್ಮ ಆಯುಷಿ, ನೀನು ನಿನ್ನ ಗಂಡ ಹಾಕಿಕೊಂಡ ಪ್ಲಾನಿಗೆ 'ಹೂಂ' ಅಂತಲೂ ಹೇಳಿಲ್ಲ, 'ಊಹ್ಞೂ' ಅಂತಲೂ ಹೇಳಿಲ್ಲ' ಎಂದರು. ಆಗ ಜಯಂತಿ 'ಹೌದು, ಯಾಕೆ ಮೌನ?' ಎಂದು ರಾಯರನ್ನು ಬೆಂಬಲಿಸಿದರು.

ಆಯುಷಿ 'ಇದ್ದುದರಲ್ಲಿ ಸುಖ ಇದ್ದರಲ್ಲವಾ ಇನ್ನು ಇಲ್ಲದಿರುವುದನ್ನು ನೋಡಿ ಸುಖ ಪಡುವುದು' ಎಂದು ಗೊಣಗುತ್ತಾ ಇನ್ನು ಇಲ್ಲಿ ನಿಲ್ಲಬಾರದು ಎಂಬಂತೆ ಹಜಾರದಾಚೆ ನಡೆದಳು.

ಯಾರೂ ಅದಕ್ಕೆ ಪ್ರತಿಕ್ರಿಯೆ ಕೊಡಲಿಲ್ಲ. ಎಲ್ಲರೂ ಕೈತೊಳೆದು ಹಜಾರಕ್ಕೆ ಬರುತ್ತಿದ್ದ ಹಾಗೆ ರಾಯರೇ 'ನೋಡಿ ಮಿಸ್ಟರ್ ಸಂಜೀವ ರಾವ್, ನಾನು ನಿಮ್ಮನ್ನು ನೋಡಲಿಕ್ಕೆಂದು ಇಲ್ಲಿಗೆ ಬಂದ ವಿಷಯ ನಿಮಗೆ ಗೊತ್ತಿದೆ ಎಂದುಕೊಂಡಿದ್ದೇನೆ. ನೀವು ಈಗ ಕೋರ್ಟಿಗೆ ಹೋಗುವುದಿದ್ದರೆ ಹೋಗಿ ಬನ್ನಿ. ಫ್ರೀ ಇದ್ದೇನೆ ಅಂದರೆ ನಾವು ಸ್ವಲ್ಪ ಖಾಸಗಿಯಾಗಿ ಮಾತನಾಡಬೇಕು ಅಂತ ಬಂದಿದ್ದೇನೆ' ಎಂದರು.

ಸಂಜೀವ ರಾಯರು 'ಎಸ್ ಸರ್, ನನಗೆ ನೀವು ಬರುವ ವಿಚಾರ ಗೊತ್ತು. ನನ್ನ ಅತ್ತೆ ಈಗಾಗಲೇ ಆ ವಿಚಾರ ನನಗೆ ತಿಳಿಸಿದ್ದಾರೆ. ನಾನು ಅದಕ್ಕೆ ಆಗಲೇ ಒಪ್ಪಿಗೆ ನೀಡಿದ್ದೇನೆ. ಖಂಡಿತವಾಗಿಯೂ ನನಗೆ ಇದೆ ಎಂದುಕೊಂಡಿರುವ ಸಮಸ್ಯೆಯಿಂದ ಹೊರಬರಬೇಕೆನ್ನುವ ಆಸೆ ನನ್ನಲ್ಲಿದೆ. ಆದರೆ ಹೇಗೆ ಎನ್ನುವುದನ್ನು ನಾನು ಈತನಕ ಯಾರಲ್ಲೂ ಚರ್ಚಿಸಿಲ್ಲ. ನನ್ನ ಅತ್ತೆಯವರನ್ನು ಕೂರಿಸಿಕೊಂಡು ಆಯುಷಿ ಏನೆಲ್ಲ ಹೇಳಿದ್ದಾಳೋ ನನಗೆ ಗೊತ್ತಿಲ್ಲ. ಅದನ್ನು ಅವಳು ನನಗೆ ಹೇಳಿಯೂ ಇಲ್ಲ. ತೀರಾ ವೈಯಕ್ತಿಕ ಅಂದರೆ ಗಂಡ ಹೆಂಡತಿಯ ಆಚೆ ಇದನ್ನು ಹೇಳುವಂಥದ್ದಲ್ಲ ಎಂಬ ನಂಬಿಕೆ ವಿಶೇಷವಾಗಿ ನನ್ನ ಹೆಂಡತಿಗೆ ಇರಬೇಕು. ಆ ನಂಬಿಕೆ ಅತ್ತೆಗೂ ಸ್ವಲ್ಪಮಟ್ಟಿಗೆ ಇರುವುದರಿಂದ ಖಂಡಿತ ಪರಿಹರಿಸಿಕೊಳ್ಳಬಹುದಾದ ಈ ಸಮಸ್ಯೆ ಬಹಳ ದಿನಗಳಿಂದ ಹಾಗೇ ಉಳಿದುಹೋಗಿದೆ ಎಂದು ನನ್ನ ಊಹೆ. ನೀವು ಸೀನಿಯರ್ ಸಿಟಿಜನ್. ನಮ್ಮಲ್ಲಿ ಬ್ಲಡ್ ರಿಲೇಶನ್ ಇಲ್ಲದಿದ್ದರೂ ಅದಕ್ಕಿಂತ ಹೆಚ್ಚಿನ ಬಾಂಧವ್ಯವನ್ನು ನೀವು ನನ್ನ ಅತ್ತೆಯ ಕುಟುಂಬದೊಂದಿಗೆ ಇಟ್ಟುಕೊಂಡು ಬಂದದ್ದು ನನಗೆ ಗೊತ್ತು' ಎಂದವರೇ, 'ನೀವು ರೆಡಿ ಅಂದರೆ ನಾವು ಅಪ್‌ಸ್ಟೇರಿನಲ್ಲಿರುವ ನನ್ನ ಆಫೀಸಿನಲ್ಲಿ ಕುಳಿತು ಚರ್ಚಿಸಬಹುದು' ಎಂದರು.

(ಸಶೇಷ)